ಶ್ರೀ ಗೋಪಿನಾಥ ಆರ್. ಸಾಂಡ್ರಾ :- ಒಂದೆರಡು ಪ್ರಶ್ನೆ ಬಿಟ್ಟು, ಉಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಕೊಡುತ್ತೇನೆ. ಮಾನ್ಯ ಸದಸ್ಯರ ಈ ಪ್ರಶ್ನೆಗೆ, ಇನ್ನು ಮೂರು ದಿವಸದಲ್ಲಿ ಉತ್ತರವನ್ನು ಕೊಡುತ್ತೇನೆ.

ವಿಷಯ :- ಪರಿಶಿಷ್ಟ ಜಾತಿ :ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಿಗೆ ಅನುದಾನ ನೀಡುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 66(52)

ಶ್ರೀ ಮನೋಹರ ಯು.ಐನಾಪುರ(ಬಳ್ಳೊಳ್ಳಿ)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸರ್ಕಾರದ ನಿಯಮಾವಳಿ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಅನುದಾನ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಬಿಜಾಪುರ ಜಿಲ್ಲೆಯನ್ನು ಹೊರತು ಪಡಿಸಿ ಬೇರೆ ಜಿಲ್ಲೆಯಲ್ಲಿ ಅನುದಾನವನ್ನು ಆರ್ಥಿಕ ವರ್ಷದಲ್ಲಿ ನೀಡಿರುವುದು ನಿಜವೇ?

(ಇ) ತಡವಾಗಿರುವುದಕ್ಕೆ ಕಾರಣವೇನು?

ಶ್ರೀ ಧರ್ಮಸಿಂಗ್

(ಸಮಾಜ ಕಲ್ಯಾಣ ಸಚಿವರು)

ಸರ್ಕಾರದ ನಿಯಮಗಳನುಸಾರವಾಗಿ ಸಕಾಲದಲ್ಲಿ ಬಂದಿದ್ದ ಎಲ್ಲಾ ಅನುದಾನ ಪ್ರಸ್ತಾವನೆಯನ್ನು ಮಂಜೂರು ಮಾಡಲಾಗಿದೆ.

ಮೇಲಿನ ಉತ್ತರದಂತೆ ಇತರೆ ಜಿಲ್ಲೆಗಳ ಜೊತೆಗೆ ಬಿಜಾಪುರ ಜಿಲ್ಲೆಯಿಂದಲೂ ಬಂದ ಅನುದಾನ ಪ್ರಸ್ತಾವನೆಗಳಿಗೆ ಲಭ್ಯವಾಗಬಹುದಾದ ಅನುದಾನ ಬಿಡುಗಡೆ ಮಾಡಲಾಗಿದೆ.

ಉದ್ಭವಿಸುವುದಿಲ್ಲ.

ಶ್ರೀ ಮನೋಹರ್ ಯು.ಐನಾಪುರ :- ಸಭಾಧ್ಯಕ್ಷರೇ, ನಾನು ಬಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ವಿದ್ಯಾರ್ಥಿನಿಲಯಗಳಿಗೆ, ಸರ್ಕಾರದ ಆದೇಶದ ಪ್ರಕಾರ, ಅಂದರೆ, ಪ್ರತಿ ವಿದ್ಯಾರ್ಥಿಗೆ 250 ರೂಪಾಯಿಯಂತೆ ಅನುದಾನವನ್ನು ಕೊಟ್ಟಿದ್ದೀರೋ ಇಲ್ಲವೋ ಎಂದು ಕೇಳಿದ್ದೇನೆ. ಇದನ್ನು ಕನ್‌ಸಿಡರ್ ಮಾಡಿ ಗ್ರಾಂಟನ್ನು ಒದಗಿಸಿದ್ದೇವೆಂದು ಮಾನ್ಯಸಚಿವರು ಹೇಳಿದ್ದಾರೆ. ಆದರೆ, ನನಗೆ ಗೊತ್ತಿರುವಹಾಗೆ, ಕೇವಲ ಬಿಜಾಪುರ ಜಿಲ್ಲೆ ಬಿಟ್ಟು, ಬೇರೆ ಎಲ್ಲಾ ಜಿಲ್ಲೆಗಳಲ್ಲಿಯೂ ಸರ್ಕಾರಿ ಆದೇಶದ ಪ್ರಕಾರ, ಪ್ರತಿ ವಿದ್ಯಾರ್ಥಿಗೆ 250 ರೂಪಾಯಿಯಂತೆ ಅನುದಾನವನ್ನು ಕೊಡಲಾಗಿದೆ. ಆದರೆ, ಬಿಜಾಪುರ ಜಿಲ್ಲೆಯಲ್ಲಿ ಕೊಟ್ಟಿಲ್ಲ. ಅದಕ್ಕಾಗಿ, ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೂ ಕೂಡ, ಸಮಕ್ಷಮ ನನ್ನ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿರತಕ್ಕ ಧನಸಹಾಯದ ವಿದ್ಯಾರ್ಥಿನಿಲಯಗಳು ಅರವತ್ತಾರು ಏನಿವೆ, ಅದರಲ್ಲಿ ಕೆಲವು ವಿದ್ಯಾರ್ಥಿನಿಲಯಗಳ ವರದಿಗಳು ಜಿಲ್ಲಾ ಪರಿಷತ್ತುಗಳಿಂದ ಬರಬೇಕಾಗಿದೆ; ಈ ವರದಿಗಳು ಬಂದಮೇಲೆ ಕೊಡುತ್ತೇವೆ. ನಿನ್ನೆ ಕೂಡ

ಡೈರಕ್ಟರಿಗೆ ಹೇಳಿದ್ದೇನೆ, ಪೆಂಡಿಂಗ್ ಕೇಸಸ್ ಏನಿವೆ, ಅವುಗಳಿಗೆ ಕೂಡಲೇ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ ಮತ್ತು ಹಣವನ್ನು ತ್ವರಿತವಾಗಿ ಬಿಡುಗಡೆ ಮಾಡುತ್ತೇವೆ.

ಶ್ರೀ ಮನೋಹರ್ ಯು.ಐನಾಪುರ :- ಸಭಾಧ್ಯಕ್ಷರೇ, ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಮಾರ್ಚ್ 31ರೊಳಗೆ, ಹಣಕಾಸಿನ ವರ್ಷದಲ್ಲಿ ಸರ್ಕಾರಿ ಆದೇಶದ ಪ್ರಕಾರ, 250 ರೂಪಾಯಿಗಳನ್ನು ಕೊಡಲೇಬೇಕಾಗುತ್ತದೆ. ಜಿಲ್ಲಾ ಪರಿಷತ್ತಿನಲ್ಲಿ ಕೆಲವು ಕಾರ್ಯದರ್ಶಿಗಳು ಇರಬಹುದು, ಉಪ ಕಾರ್ಯದರ್ಶಿಗಳು ಇರಬಹುದು ಅಥವಾ ಯಾರೋ ಸಂಬಂಧಪಟ್ಟ ಅಧಿಕಾರಿಗಳು ಇರಬಹುದು. ಅವರುಗಳು ಬೇಕೆಂದೇ, ಇವರಿಗೆ ಈ ಹಣವನ್ನು ಕೊಡಬಾರದು ಎನ್ನುವ ದೃಷ್ಟಿಯಿಂದ ಹಣ ಇದ್ದರೂ ಬಿಡುಗಡೆ ಮಾಡಿಲ್ಲ. ಅದಕ್ಕೆ ಮಾನ್ಯ ಸಚಿವರು ಈ ಅಧಿಕಾರಿಗಳ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತಾರೆಂದು ದಯವಿಟ್ಟು ಹೇಳಬೇಕು. ಇದನ್ನು ಪರ್ಪಸ್ ಆಗಿ ಮಾಡಿದ್ದಾರೆ; ಇನ್‌ಟೆನ್‌ಷನಲ್ ಆಗಿ ಮಾಡಿದ್ದಾರೆ. ದುಡ್ಡು ಇತ್ತು, ಎಲ್ಲಾ ಇತ್ತು. ಭೇರೆ ಎಲ್ಲಾ ಜಿಲ್ಲೆಗಳಲ್ಲಿ ದುಡ್ಡು ಕೊಟ್ಟಿದ್ದಾರೆ.

ಶ್ರೀ ಧರ್ಮಸಿಂಗ್ :- ಮಾನ್ಯ ಸದಸ್ಯರು, ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆಗೂ ಕೊಟ್ಟು ಬಿಜಾಪುರ ಜಿಲ್ಲೆಯಲ್ಲಿ ಈ ತರಹ ಆಗುತ್ತಿದೆ ಎಂದು ಮೊದಲೂ ಕೂಡಾ ಹೇಳಿದ್ದಾರೆ. ಜಿಲ್ಲಾಪರಿಷತ್ತಿನ ಉಪ ಕಾರ್ಯದರ್ಶಿಯವರು ಆ ರೀತಿ ಮಾಡಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ. ಬಿಜಾಪುರ ಜಿಲ್ಲೆಯಲ್ಲಿ 66 ಹಾಸ್ಟೆಲ್‌ಗಳು ನಡೆಯುತ್ತಿವೆ. ತಾವು ಕೊಟ್ಟಿರುವ ಮನವಿ ಕೂಡಾ ನನಗೆ ಬಂದಿದೆ. ಅದನ್ನು ಪರಿಶೀಲಿಸಿ ಅದಕ್ಕೂ ಬಿಡುಗಡೆ ಮಾಡುವುದಕ್ಕೆ ಹೇಳಿದ್ದೇನೆ. ಇನ್ನು ಕೆಲವೇ ದಿವಸಗಳಲ್ಲಿ ಅದನ್ನು ಬಿಡುಗಡೆ ಮಾಡಿಸುತ್ತೇನೆ ಹಾಗೂ ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ :- ಮೂಡಿಗೆರೆ ತಾಲ್ಲೂಕಿನಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ ನಿವೇಶನಗಳ ಹಂಚಿಕೆ ಕುರಿತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 67(296)

ಶ್ರೀಮತಿ ಮೋಟಮ್ಮ(ಮೂಡಿಗೆರೆ)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ ಎಷ್ಟು ಜನರಿಗೆ ನಿವೇಶನ ಹಂಚಲಾಗಿದೆ;

ಆ) ಆದರಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿದ್ದಾರೆ;

ಇ) ಮೂಡಿಗೆರೆ ತಾಲ್ಲೂಕಿನಲ್ಲಿ ಇನ್ನೂ ಎಷ್ಟು ನಿವೇಶನರಹಿತ ಜನರಿದ್ದಾರೆ;

ಶ್ರೀ ಗೋಪಿನಾಥ್ ಆರ್. ಸಾಂಡ್ರಾ

(ವಸತಿ ಸಚಿವರು)

1993ರ ಜುಲೈ ಅಂತ್ಯದವರೆವಿಗೆ 2295 ನಿವೇಶನಗಳನ್ನು ಹಂಚಲಾಗಿದೆ.

720 ಜನ ಪರಿಶಿಷ್ಟ ಜಾತಿಗೂ ಹಾಗೂ 257 ಜನ ಪರಿಶಿಷ್ಟ ವರ್ಗಕ್ಕೂ ಸೇರಿದ್ದಾರೆ.

ಇನ್ನೂ ಗುರುತಿಸಿರುವ 2564 ನಿವೇಶನ ರಹಿತ ಕುಟುಂಬಗಳು ಇವೆ.